



# ಬಣ್ಣದ ಇರುವೆ

■ ಮುಕುಂದ್ ವಿ. ಕಿರಸೂರ್

ಸ್ನೇಹಿತರೂ, ಸಹೋದ್ಯೋಗಿಯೂ ಆದ ಡಾ.ಎ.ಎಂ.ಬಾಬು ಅತ್ಯುತ್ತಮ ಛಾಯಾಗ್ರಾಹಕ. ಈ ಸಂಕೋಚದ ಮನುಷ್ಯ ಇತ್ತೀಚೆಗೆ ತಾನು ತೆಗೆದ ಕೆಲವು ಛಾಯಾಚಿತ್ರಗಳನ್ನು ತೋರಿಸಿದಾಗ ನನಗೆ ಅಚ್ಚರಿ! ಕೆಂಪು, ಹಸಿರು, ಹಳದಿ, ನೀಲಿ ಮುಂತಾಗಿ ಕಲರ್ ಕಲರ್ ಇರುವೆಗಳು!

ಕಲರ್ ಹತ್ತಿ, ಕಲರ್ ರೇಷ್ಮೆ ಗೊತ್ತು. 'ಕಲರ್ ಕಾಗೆ' ಹಾರಿಸೋರೂ ಗೊತ್ತು. ಇಷ್ಟಗಲ ಕಣ್ಣು ಬಿಟ್ಕೊಂಡು 'ಎಲ್ಲಿಂದ ತಂದಿರಿ ಬಾಬು, ಈ ಕಲರ್ ಇರುವೆಗಳನ್ನು?' ಎಂದು ಕೇಳಿದೆ.

"ಇದರಲ್ಲೇನೂ ಅಂತಹ ವಿಶೇಷವಿಲ್ಲ. ಒಂದು ದಿನ ನನ್ನ ಶ್ರೀಮತಿ, ಅಡುಗೆಮನೆಯಲ್ಲಿ ಚೊಂಬಿನಲ್ಲಿ ಇಟ್ಟಿದ್ದ ಹಾಲನ್ನು ಕುಡಿದ ಇರುವೆಗಳ ಪಾರದರ್ಶಕ ಹಿಂಭಾಗ ಹಾಲಿನಂತೆ ಬೆಳ್ಳಗಾಗಿದ್ದನ್ನು ನನಗೆ ತೋರಿಸಿದರು. ತಿಂದ ಆಹಾರದ ಬಣ್ಣ ಈ ಇರುವೆಗಳ ಪಾರದರ್ಶಕ ಹಿಂಭಾಗದ ಮೂಲಕ ಕಾಣುತ್ತದೆ ಎನ್ನುವುದು ಗೊತ್ತಾಯಿತು! ಹಾಲಿನ ಬದಲು ಸಕ್ಕರೆ ಪಾಕಕ್ಕೆ ಬೇರೆ ಬೇರೆ ಅಡುಗೆ ಬಣ್ಣಗಳನ್ನು ಸೇರಿಸಿ ಒಂದು ಪ್ಯಾರಾಫಿನ್ ಹಾಳೆಯ ಮೇಲೆ ಹನಿಹನಿಯಾಗಿ ಬಿಟ್ಟೆ. ಬಣ್ಣದ ಸಕ್ಕರೆಯ ಪಾಕದ ಬಿಂದುಗಳು ಸ್ಥಿರತೆಯನ್ನು ಕಾಯ್ದುಕೊಳ್ಳಲು ಈ ಪ್ಯಾರಾಫಿನ್ ಹಾಳೆ ಸಹಾಯ ಮಾಡುತ್ತದೆ. ಅನಂತರ ಇರುವೆಗಳನ್ನು ಆಕರ್ಷಿಸಲು ಜಾಗರೂಕತೆಯಿಂದ ಈ ಪ್ಯಾರಾಫಿನ್ ಹಾಳೆಯನ್ನು ಮನೆಯ ಕೈತೋಟದಲ್ಲಿಟ್ಟೆ. ಸಾಲು ಸಾಲು ಇರುವೆಗಳು ಬಂದು ಈ ಬಣ್ಣಬಣ್ಣದ ಸಕ್ಕರೆಯ ಪಾಕವನ್ನು ಉಂಡು ತಮ್ಮ ದೇಹದ ಬಣ್ಣವನ್ನು ಬದಲಿಸಿಕೊಂಡವು.. ಅಷ್ಟೇ!"

ಆಹಾರ ಹುಡುಕುವಾಗ, ಕೆಲಸ ಮಾಡುವಾಗ ಶಿಸ್ತಿನ ಸಿಪಾಯಿಯಂತೆ ಸಾಲು ಸಾಲಾಗಿ ಚಲಿಸುವ ಇರುವೆಗಳು ಆಹಾರದ ತುಣುಕನ್ನು ಕಂಡ ತಕ್ಷಣ ಗುಂಪು ಗುಂಪಾಗಿ ಅದಕ್ಕೆ ಮುತ್ತಿಗೆ ಹಾಕುತ್ತವೆ. ಈ ಫೋಟೋಗಳಲ್ಲಿ ಅವೆಲ್ಲ 'ಪೋಸ್' ಕೊಡುವಂತೆ ಸಕ್ಕರೆ ಬಿಂದುಗಳ ಸುತ್ತ ಸಾಲಾಗಿ ನಿಂತಿವೆ! 'ಇದು ಹೇಗೆ ಸಾಧ್ಯ?' ಎಂದು ಕೇಳಿದೆ. ಬಾಬು ಹೇಳಿದರು– "ನಿಜ, ಈ ಇರುವೆಗಳು ಗುಂಪು ಗುಂಪಾಗಿಯೇ ಆಹಾರಕ್ಕೆ ಮುತ್ತಿಗೆ ಹಾಕಿದ್ದವು. ನಾನೇ ಕಷ್ಟ ಪಟ್ಟು ಈ ಸಾಲು ಮಾತ್ರ ಉಳಿಯುವಂತೆ ಮಿಕ್ಕೆಲ್ಲ ಇರುವೆಗಳನ್ನು ಹೆಕ್ಕಿ ತೆಗೆದು ಹಾಕಿದೆ."

ಇವರ ಪ್ರಯೋಗ ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿದೆ. ನ್ಯಾಷನಲ್ ಜಿಯೋಗ್ರಾಫಿಯ ಡೇಲಿ ಡಜನ್ ಗ್ಯಾಲರಿಯಲ್ಲಿ ಅತ್ಯುತ್ತಮ ಛಾಯಾಚಿತ್ರಗಳಾಗಿ, ಇಂಗ್ಲೆಂಡಿನ 'ಟೆಲಿಗ್ರಾಫ್', 'ಡೇಲಿ ಮೇಲ್' ಮತ್ತು ಅಮೆರಿಕದ 'ಸನ್' ಪತ್ರಿಕೆಗಳಲ್ಲೂ ಪ್ರಕಟಗೊಂಡಿವೆ. ಅಮೆರಿಕದ ಎಬಿಸಿ ಟೀವಿಯಲ್ಲೂ ವಿವರಗಳು ಮೂಡಿ ಬಂದಿದೆ. ಇನ್ನಿತರ ವಿದೇಶಿ ಮಾಧ್ಯಮಗಳಲ್ಲಿ, ಫೇಸ್‌ಬುಕ್‌ನಲ್ಲಿ, ಅಂತರ್ಜಾಲ ತಾಣಗಳಲ್ಲಿ ಈಗ ಈ ಕಲರ್ ಇರುವೆಗಳದ್ದೇ ಓಡಾಟ!

ಬಾಬು ಇನ್ನೊಂದು ವಿಶೇಷವನ್ನೂ ಗಮನಿಸಿದ್ದಾರೆ. ಅದು ಇರುವೆಗಳ ಕಲರ್ ಪ್ರಿಫರೆನ್ಸ್! ಈ ಇರುವೆಗಳಿಗೆ ತಿಳಿಬಣ್ಣಗಳೆಂದರೆ ಅದರಲ್ಲೂ ಹಳದಿ ಇಲ್ಲವೆ ಹಸಿರು ಬಣ್ಣಗಳು ತುಂಬಾ ಇಷ್ಟ. ಎಲ್ಲಾ ಬಣ್ಣಗಳ ಸಕ್ಕರೆ ಬಿಂದುಗಳನ್ನು ಸವಿದ ಇರುವೆಗಳ ಬಣ್ಣ ಮಿಕ್ಸೆಡ್ ಕಲರ್! ಈ ಬಣ್ಣದ ಇರುವೆಗಳ ಜನಪ್ರಿಯತೆಯನ್ನು ತಿಳಿದುಕೊಳ್ಳಬೇಕೆಂದರೆ 'ಗೂಗಲ್ ಸರ್ಚ್'ಗೆ ಹೋಗಿ 'ಕಲರ್ ಆಂಟ್ಸ್' ಎಂದು ಕ್ಲಿಕ್ಕಿಸಿ. ಬಾಬುರವರ ಬಣ್ಣ ಬಣ್ಣದ ಇರುವೆಗಳ ಪ್ರಪಂಚವೇ ತೆರೆದುಕೊಳ್ಳುತ್ತದೆ !